## ಪ್ರಾತ್ಯಕ್ಷಿಕೆಗಳ ಪ್ರಸ್ತುತಿ :

ಪ್ರತಿನಿಧಿಗಳು ತಮ್ಮ ಸಂಶೋಧನಾ ಫಲಿತಾಂಶವನ್ನು ಕನ್ನಡದಲ್ಲಿ ಪ್ರಾತ್ಯಕ್ಷಿಕೆಗಳ ಮೂಲಕ ಪ್ರಸ್ತುತಪಡಿಸಲು ಸಮ್ಮೇಳನವು ಒಂದು ವೇದಿಕೆಯನ್ನು ಕಲ್ಪಿಸಿದೆ. ಮೂಲ ಮತ್ತು ಅನ್ವಯಿಕ ವಿಜ್ಞಾನಗಳಿಗೆ ಸಂಬಂಧಿಸಿದ ಯಾವುದೇ ವಿಷಯದ ಪ್ರಾತ್ಯಕ್ಷಿಕೆಗಳನ್ನು ಮಂಡಿಸಬಹುದಾಗಿದೆ. ವೈಜ್ಞಾನಿಕ ಸಂಶೋಧನೆಗಳಿಗೆ ಪ್ರೋತ್ಸಾಹವನ್ನು ನೀಡುವ ಸಲುವಾಗಿ ಅತ್ಯುತ್ತಮ ಪ್ರಾತ್ಯಕ್ಷಿಕೆಗಳಿಗೆ ಬಹುಮಾನವನ್ನು ಕೆಳಕಂಡಂತೆ ನೀಡಲಾಗುವುದು :

**ಪ್ರಥಮ ಬಹುಮಾನ – 10,000**
**ದ್ವಿತಿಯ ಬಹುಮಾನ – 7,500**
**ತೃತೀಯ ಬಹುಮಾನ – 5,000**

ಅಕಾಡೆಮಿಯ ಸದಸ್ಯರು ಮತ್ತು ವಿಶ್ವವಿದ್ಯಾಲಯ ಪ್ರಾಧ್ಯಾಪಕರುಗಳನ್ನು ಒಳಗೊಂಡ ತಜ್ಞ ಸಮಿತಿಯು ಅತ್ಯುತ್ತಮವಾದ ಪ್ರಾತ್ಯಕ್ಷಿಕೆಗಳನ್ನು ಬಹುಮಾನಕ್ಕೆ ಆಯ್ಕೆ ಮಾಡಲಿದೆ

## ವೈಜ್ಞಾನಿಕ ಪ್ರಾತ್ಯಕ್ಷಿಕೆಗಳನ್ನು ಸಲ್ಲಿಸಲು ಮಾನದಂಡ :

ಪ್ರಾತ್ಯಕ್ಷಿಕೆ ಅಧಿವೇಶನಕ್ಕೆ ಆಯ್ಕೆಯಾದ ಪ್ರಾತ್ಯಕ್ಷಿಕೆಗಳನ್ನು ಪ್ರದರ್ಶಿಸಲು ಸೂಕ್ತ ಸ್ಥಳಾವಕಾಶವನ್ನು ನೀಡಲಾಗುವುದು (ಪ್ರತಿ ಪ್ರಾತ್ಯಕ್ಷಿಕೆಗೆ 3*2 1/2 ಅಡಿ ಜಾಗ) ಸಮ್ಮೇಳನದ ಸಮಯದಲ್ಲಿ ಎಲ್ಲಾ ಪ್ರಾತ್ಯಕ್ಷಿಕೆಗಳನ್ನು ಮೊದಲ ಲೇಖಕರೇ ಪ್ರಸ್ತುತ ಪಡಿಸಬೇಕು. ಒಬ್ಬ ಲೇಖಕರು ಒಂದೇ ಪ್ರಾತ್ಯಕ್ಷಿಕೆಯನ್ನು ಸಲ್ಲಿಸುವುದು. ತಜ್ಞರು ಆಯ್ಕೆ ಮಾಡಿದ ಪ್ರಾತ್ಯಕ್ಷಿಕೆಗಳನ್ನು 2020 ರ ಫೆಬ್ರುವರಿ 18 ರಂದು (ಮಂಗಳವಾರ) ಬೆಳಿಗ್ಗೆ 8:30ಕ್ಕೆ ನಿಗದಿಪಡಿಸಿದ ಸ್ಥಳದಲ್ಲಿ ಪ್ರದರ್ಶನಕ್ಕೆ ಇಡಲಾಗುವುದು. ಸಮ್ಮೇಳನದ ಪ್ರತಿನಿಧಿಗಳು ಪ್ರಾತ್ಯಕ್ಷಿಕೆಗಳನ್ನು ಚಹಾ ವಿರಾಮ ಮತ್ತು ಭೋಜನ ವಿರಾಮ ಸಮಯದಲ್ಲಿ ವೀಕ್ಷಿಸಲು ಅನುವು ಮಾಡಿಕೊಡಲಾಗುವುದು., ಈ ಸಮಯದಲ್ಲಿ ಲೇಖಕರು ತಮ್ಮ ಪ್ರಾತ್ಯಕ್ಷಿಕೆಯ ಬಳಿಯಿದ್ದು, ಪ್ರತಿನಿಧಿಗಳೊಂದಿಗೆ ಚರ್ಚಿಸುವುದು. ಪ್ರಾತ್ಯಕ್ಷಿಕೆಗಳನ್ನು 2020ರ ಫೆಬ್ರುವರಿ 19 ರಂದು (ಬುಧವಾರ) ಸಂಜೆ 5:00 ಗಂಟೆಗೆ ತೆಗೆಯಬಹುದಾಗಿದೆ.

## ಕಾರ್ಯಕ್ರಮದ ಉದ್ದೇಶ :

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಸಮ್ಮೇಳನದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳ ಹೊಸ ಹೊಸ ಸಂಶೋಧನೆ. ಮುಂಚೂಣಿಯಲ್ಲಿ ಇರುವ ವೈಜ್ಞಾನಿಕ ಕ್ಷೇತ್ರಗಳು, ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾದ ತಂತ್ರಜ್ಞಾನಗಳು ಹಾಗೂ ಇತರೆ ವೈಜ್ಞಾನಿಕ ವಿಷಯಗಳ ಬಗ್ಗೆ ವಿವಿಧ ಕ್ಷೇತ್ರಗಳ ತಜ್ಞರು, ಪರಿಣಿತರು ಮತ್ತು ವಿಜ್ಞಾನಿಗಳಿಂದ ಕನ್ನಡದಲ್ಲಿ ಉಪನ್ಯಾಸಗಳನ್ನು ಏರ್ಪಡಿಸಲಾಗುವುದು.

## ನೋಂದಾವಣೆ :

ಸಮ್ಮೇಳನದಲ್ಲಿ ಪ್ರತಿನಿಧಿಗಳಾಗಿ ಭಾಗವಹಿಸಲು ಇಚ್ಛಿಸುವವರು ಅಕಾಡೆಮಿಯ ಅಂತರ್ಜಾಲ ತಾಣ ಅಥವಾ ಕೆ.ಸಿ.ಪಿ. ವಿಜ್ಞಾನ ಕಾಲೇಜಿನ ಅಂತರ್ಜಾಲ ತಾಣಗಳಲ್ಲಿ ಲಭ್ಯವಿರುವ ಅರ್ಜಿ ನಮೂನೆಯಲ್ಲಿ ಸಮುಚಿತ ಮಾರ್ಗವಾಗಿ ಸಲ್ಲಿಸತಕ್ಕದ್ದು, ನೋಂದಣಿ ಶುಲ್ಕ ರೂ. 200/–ಗಳ ಡಿಡಿ ಅಥವಾ ಆನ್‌ಲೈನ್ ಮೂಲಕ ಖಾತೆಗೆ ಸಂದಾಯವಾಗುವಂತೆ ಭರಿಸಬೇಕು.

### Account Detail

Ac/ No.: 32015994113

IFSC Code: SBIN0014429

STATE BANK OF INDIA

SBI, BLDE Campus, Solapur Road, Vijayapur

## ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:

**ಡಾ. ಎ. ಎಂ .ರಮೇಶ್**
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ
ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ
ಬೆಂಗಳೂರು.
ಇ–ಮೇಲ್: kstakannadacon3@gmail.com
ಮೊಬೈಲ್ : 9845258894

**ಡಾ. ಗಿರಿಜಾ ನಿಂಬಾಳ**
ಪ್ರಾಧ್ಯಾಪಕರು, ಭೌತಶಾಸ್ತ್ರ ವಿಭಾಗ,
ಎಸ್.ಬಿ.ಕಲಾ & ಕೆ.ಸಿ.ಪಿ. ವಿಜ್ಞಾನ ಮಹಾವಿದ್ಯಾಲಯ
ವಿಜಯಪುರ.
ಇ–ಮೇಲ್: drgirija.nimbal@gmail.com
ಮೊಬೈಲ್ : 9845736196

**ಶ್ರೀ ಮಹದೇವೇಗೌಡ**
ಆಡಳಿತಾಧಿಕಾರಿ
ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ
ಬೆಂಗಳೂರು.
ಮೊಬೈಲ್ : 9902326851

**ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ**
**ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ**
**ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರಕಾ**

ತೋಟಗಾರಿಕಾ ವಿಜ್ಞಾನಗಳ ಕಾಲೇಜು ಆವರಣ,
ಜಿ.ಕೆ.ವಿ.ಕೆ, ಮೇ.ಸಂದೀಪ್ ಉನ್ನಿಕೃಷ್ಣನ್ ರಸ್ತೆ,
ದೊಡ್ಡ ಬೆಟ್ಟಹಳ್ಳಿ ಬಸ್‌ನಿಲ್ದಾಣದ ಎದುರು, ವಿದ್ಯಾರಣ್ಯಪುರ ಪೋಸ್ಟ್,
ಬೆಂಗಳೂರು- 560097
ದೂರವಾಣಿ : 080-29721550

email: ksta.gok@gmail.com
website: www.kstacademy.in

ಹಾಗೂ

**ಬಿ.ಎಲ್.ಡಿ.ಇ. ಸಂಸ್ಥೆಯ**
**ಎಸ್.ಬಿ. ಕಲಾ ಮತ್ತು ಕೆ.ಸಿ.ಪಿ. ವಿಜ್ಞಾನ ಮಹಾವಿದ್ಯಾಲಯ**
**ವಿಜಯಪುರ**

website: www.bldeasbkcp.ac.in

ಇವರ ಸಹಯೋಗದೊಂದಿಗೆ

# ಕನ್ನಡದಲ್ಲಿ 3ನೇ ವಿಜ್ಞಾನ ಮತ್ತು ತಂತ್ರಜ್ಞಾನ ಸಮ್ಮೇಳನ

ಕೇಂದ್ರ ವಿಷಯ :

## 'ವಿಜ್ಞಾನ ಮತ್ತು ತಂತ್ರಜ್ಞಾನದ ಹೊಸ ಆಯಾಮಗಳು'

ದಿನಾಂಕ : 18 ಮತ್ತು 19 ಫೆಬ್ರುವರಿ 2020
ಮಂಗಳವಾರ ಮತ್ತು ಬುಧವಾರ

ಸ್ಥಳ:
ಅಡಿಟೋರಿಯಂ ಹಾಲ್
(ಬಿ.ಎಲ್.ಡಿ.ಇ. ವೈದ್ಯಕೀಯ ಮಹಾವಿದ್ಯಾಲಯ, ವಿಜಯಪುರ



## ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ :

ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ, ಇದರ ಅಂಗ ಸಂಸ್ಥೆಯಾದ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯನ್ನು 2005ರ ಜುಲೈನಲ್ಲಿ ಸ್ಥಾಪಿಸಲಾಗಿದ್ದು, ಪ್ರಸಿದ್ಧ ಬಾಹ್ಯಾಕಾಶ ವಿಜ್ಞಾನಿ ಪದ್ಮವಿಭೂಷಣ ದಿವಂಗತ ಪ್ರೊ. ಯು. ಆರ್. ರಾವ್, ನಿವೃತ್ತ ಅಧ್ಯಕ್ಷರು, ಇಸ್ರೋ/ಕಾರ್ಯದರ್ಶಿ, ಬಾಹ್ಯಾಕಾಶ ಇಲಾಖೆ, ಭಾರತ ಸರ್ಕಾರ ಇವರು ಸಂಸ್ಥಾಪಕ ಅಧ್ಯಕ್ಷರಾಗಿದ್ದರು. ಖ್ಯಾತ ವಿಜ್ಞಾನಿಗಳು, ಹೆಸರಾಂತ ಶಿಕ್ಷಣ ತಜ್ಞರು ಹಾಗೂ ಹಿರಿಯ ಆಡಳಿತಗಾರರು ಅಕಾಡೆಮಿಯ ಸದಸ್ಯರಾಗಿದ್ದಾರೆ. ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ವಿಶೇಷ ಕಾರ್ಯದರ್ಶಿಗಳಾದ (ತಾಂತ್ರಿಕ) ಡಾ. ಹೆಚ್. ಹೊನ್ನೇಗೌಡ ಅವರು ಸದಸ್ಯ ಕಾರ್ಯದರ್ಶಿಗಳಾಗಿದ್ದಾರೆ. ಅಕಾಡೆಮಿಯು ವಿಜ್ಞಾನ ಶಿಕ್ಷಣವನ್ನು ಸದೃಢಗೊಳಿಸುವ, ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವನೆಯನ್ನು ಬೆಳೆಸುವ ಹಾಗೂ ಜನ ಸಾಮಾನ್ಯರಲ್ಲಿ ವೈಜ್ಞಾನಿಕ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಕಳೆದ ಸುಮಾರು 14 ವರ್ಷಗಳಿಂದ ತುಂಬಾ ಯಶಸ್ವಿಯಾಗಿ ರಾಜ್ಯಾದ್ಯಂತ ಆಯೋಜಿಸಿಕೊಂಡು ಬರುತ್ತಿದ್ದು. ಅವುಗಳಲ್ಲಿ ಕನ್ನಡ ಸಮ್ಮೇಳನವು ಸಹ ಒಂದು ಪ್ರಮುಖ ಕಾರ್ಯಕ್ರಮವಾಗಿದೆ.

## ಎಸ್.ಬಿ.ಕಲಾ ಮತ್ತು ಕೆ.ಸಿ.ಪಿ.ವಿಜ್ಞಾನ ಮಹಾವಿದ್ಯಾಲಯ :

ಕರ್ನಾಟಕ ಜ್ಞಾನ ದಾಸೋಹದ ಸಂಸ್ಥೆ ಎಂದೆ ಹೆಸರಾಗಿರುವ ಬಿ.ಎಲ್.ಡಿ.ಇ. ಸಂಸ್ಥೆಯು ಕರ್ನಾಟಕದ ಹೆಮ್ಮೆಯ ಮತ್ತು ಪ್ರತಿಷ್ಠಿತ ಸಂಸ್ಥೆಯಾಗಿದೆ. ಈ ಸಂಸ್ಥೆಯ ವ್ಯಾಪ್ತಿಯಲ್ಲಿ ಬರುವ ಸಂಗನ ಬಸವ ಕಲಾ ಹಾಗೂ ಕೆ.ಸಿ.ಪಿ. ವಿಜ್ಞಾನ ಮಹಾವಿದ್ಯಾಲಯವು ವಿಜಯಪುರ ಜಿಲ್ಲೆಯ ಶ್ರೇಷ್ಠ ಮಹಾವಿದ್ಯಾಲಯ ಎಂಬ ಕೀರ್ತಿಗೆ ಭಾಜನವಾಗಿದೆ. 1945ರಲ್ಲಿ ಪ್ರಾರಂಭವಾದ ಮಹಾವಿದ್ಯಾಲಯವು 25 ಪದವಿ ಅಧ್ಯಯನ ವಿಭಾಗಗಳನ್ನು ನಾಲ್ಕು ಸ್ನಾತಕೋತ್ತರ ವಿಭಾಗಗಳನ್ನು ಹೊಂದಿದೆ. ನ್ಯಾಕನಿಂದ "ಎ" ಗ್ರೇಡ್ ಮಾನ್ಯತೆ ಹೊಂದಿದೆ. ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ.ಎ.ಎಸ್.ಪೂಜಾರ ಅವರು ಸ್ನೇಹಪರ ವ್ಯಕ್ತಿತ್ವದವರಾಗಿದ್ದು ಮಹಾವಿದ್ಯಾಲಯದ ಸಮಸ್ತ ಅಭಿವೃದ್ಧಿಗಾಗಿ, ತಮ್ಮ ಅನುಪಮ ಸೇವೆಯಲ್ಲಿ ಅವಿರತವಾಗಿ ತೊಡಗಿಸಿಕೊಂಡು ವಿದ್ಯಾರ್ಥಿಗಳ ಮುನ್ನಡೆಗಾಗಿ ಹತ್ತು ಹಲವಾರು ಯೋಜನೆಗಳನ್ನು ರೂಪಿಸಿ ವಿದ್ಯಾರ್ಥಿಗಳಿಗೆ ಎಲ್ಲ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿ ಅವರ ಮುನ್ನಡೆಗಾಗಿ ಮಹಾವಿದ್ಯಾಲಯದ ಉನ್ನತಿಗಾಗಿ ಶ್ರಮಿಸುತ್ತಿದ್ದಾರೆ.

## ಕನ್ನಡದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಸಮ್ಮೇಳನ :

ವಿಜ್ಞಾನ ಮತ್ತು ತಂತ್ರಜ್ಞಾನಗಳು ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಗೆ ಬಹು ಮುಖ್ಯ ಸಾಧನಗಳೆಂದು ವ್ಯಾಪಕವಾಗಿ ಗುರುತಿಸಲ್ಪಟ್ಟಿವೆ. ವೈಜ್ಞಾನಿಕ ಸಂಶೋಧನೆ ಮತ್ತು ತಂತ್ರಜ್ಞಾನ ಆವಿಷ್ಕಾರಗಳು ವಿಶ್ವಾದ್ಯಂತ ಶರವೇಗದಲ್ಲಿ ಸಾಗುತ್ತಿವೆ. ವೈಜ್ಞಾನಿಕ ಸಂಶೋಧನೆ ಮತ್ತು ಆವಿಷ್ಕಾರಗಳ ಫಲದಿಂದ ನಮಗೆ ಅನೇಕ ಸೌಕರ್ಯ ಮತ್ತು ಸವಲತ್ತುಗಳು ದೊರೆತು ಜನಜೀವನದ ಗುಣಮಟ್ಟ ಉತ್ತಮಗೊಂಡಿದೆ. ಆದಕಾರಣ, ವಿಜ್ಞಾನ ಮತ್ತು ತಂತ್ರಜ್ಞಾನಗಳು ಜನ ಜೀವನದ ಅವಿಭಾಜ್ಯ ಅಂಗಗಳಾಗಿ, ನಾವು ಜೀವಿಸುವ, ಸಂಪರ್ಕಿಸುವ, ಸಂವಹನ ಮಾಡುವ ಮತ್ತು ವ್ಯವಹರಿಸುವ ವಿಧಾನವನ್ನು ಬದಲಿಸಿವೆ.

ಇಂದಿನ ಜಾಗತಿಕ ಜ್ಞಾನ ಪ್ರಧಾನ ಆರ್ಥಿಕ ವ್ಯವಸ್ಥೆಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳ ಬೆಳವಣಿಗೆ ಅನೂಹ್ಯ ವೇಗದಲ್ಲಿ ಸಾಗುತ್ತಿದ್ದು, ವಿಶ್ವಾದ್ಯಂತ ಹೆಚ್ಚಿನ ಮಹತ್ವವನ್ನು ನೀಡಲಾಗುತ್ತಿದೆ. ಆದಕಾರಣ, ದೇಶದ ಬೆಳವಣಿಗೆಗೆ ಪೂರಕವಾದ ತಂತ್ರಜ್ಞಾನ ಮತ್ತು ಅನ್ವಯಿಕಗಳ ಅಭಿವೃದ್ಧಿಗೆ ಹೆಚ್ಚಿನ ಪ್ರೋತ್ಸಾಹವನ್ನು ನೀಡುವುದು ಇಂದಿನ ಅಗತ್ಯವಾಗಿದೆ.

ವಿವಿಧ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ಹೊಸ ಹೊಸ ಅನ್ವೇಷಣೆಗಳು ಮತ್ತು ಆವಿಷ್ಕಾರಗಳು ನಿರಂತರವಾಗಿ ಹೊರಹೊಮ್ಮುತ್ತಿವೆ. ಕೃಷಿ, ಮಾಹಿತಿ, ಜೈವಿಕ ತಂತ್ರಜ್ಞಾನ, ಸಂವಹನ ತಂತ್ರಜ್ಞಾನ, ನ್ಯಾನೋ ತಂತ್ರಜ್ಞಾನ, ಆರೋಗ್ಯ, ಸೈಬರ್ ಭದ್ರತೆ, ಬಾಹ್ಯಾಕಾಶ ಸಂಶೋಧನೆ, ಪರಿಸರ ಮುಂತಾದ ಕ್ಷೇತ್ರಗಳಲ್ಲಾಗುತ್ತಿರುವ ಪ್ರಗತಿಯ ಬಗ್ಗೆ ಅರಿವು ಜನಸಾಮಾನ್ಯರಲ್ಲಿ, ಅದರಲ್ಲೂ ಮುಖ್ಯವಾಗಿ ವಿದ್ಯಾರ್ಥಿಗಳಲ್ಲಿ ಇರುವುದು ಅಗತ್ಯ. ಇದರಿಂದ ವಿದ್ಯಾರ್ಥಿಗಳು ಸಂಶೋಧನಾ ಕ್ಷೇತ್ರದಲ್ಲಿ ಹೆಚ್ಚಿನ ಆಸಕ್ತಿ ಪಡೆಯಲು, ತನ್ಮೂಲಕ ತಮ್ಮ ವೃತ್ತಿಜೀವನವನ್ನು ಪ್ರಾರಂಭಿಸಲು ಪ್ರೇರಣೆ ದೊರೆಯುವುದು.

ಈ ಹಿನ್ನಲೆಯಲ್ಲಿ, ವಿಜ್ಞಾನದ ವಿವಿಧ ಶಾಖೆಗಳಲ್ಲಿ ಪದವಿ ಮತ್ತು ಸ್ನಾತಕೋತ್ತರ ಪದವಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ, ಉಪನ್ಯಾಸಕರಿಗೆ/ಅಧ್ಯಾಪಕರಿಗೆ, ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ಮತ್ತು ಆಸಕ್ತ ಜನಸಾಮಾನ್ಯರಿಗೆ ಆಧುನಿಕ ಸಂಶೋಧನೆ, ಆವಿಷ್ಕಾರಗಳು ಮತ್ತು ನೂತನ ತಂತ್ರಜ್ಞಾನಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ನೀಡಿ ವೈಜ್ಞಾನಿಕ ಅರಿವು ಮೂಡಿಸಲು ಅಕಾಡೆಮಿಯು, ವಿಜ್ಞಾನ ಮತ್ತು ತಂತ್ರಜ್ಞಾನ ಸಮ್ಮೇಳನವನ್ನು ಕನ್ನಡದಲ್ಲಿ ಕಳೆದ ಎರಡು ವರ್ಷಗಳಿಂದ ಆಯೋಜಿಸುತ್ತಿದೆ.

## ಸಾರಾಂಶದ ಸಲ್ಲಿಕೆ ಮತ್ತು ಪ್ರಾತ್ಯಕ್ಷಿಕೆಗಳ ಪ್ರಸ್ತುತಿ

- **ಪ್ರಾತ್ಯಕ್ಷಿಕೆಯ ಸಾರಾಂಶವನ್ನು ಕನ್ನಡದಲ್ಲಿ 750 ಪದಗಳಿಗೆ ಮೀರದಂತೆ ಸಲ್ಲಿಸುವುದು.**
- **ಸಾರಾಂಶವನ್ನು ನುಡಿ 05ಇ ಅಕ್ಷರದಲ್ಲಿ ಬೆರಳಚ್ಚು ಮಾಡಿಸಿ, ಇ–ಅಂಚೆ ಮೂಲಕ** kstakannadacon3@gmail.com **ಗೆ ಸಲ್ಲಿಸುವುದು.**
- **ಸಾರಾಂಶವನ್ನು ಸಲ್ಲಿಸಲು ಕೊನೆಯ ದಿನಾಂಕ 8 ನೇ ಫೆಬ್ರುವರಿ 2020 (ಶನಿವಾರ)**
- **ನಿಗದಿತ ದಿನಾಂಕದ ನಂತರ ಸಲ್ಲಿಸುವ ಸಾರಾಂಶಗಳನ್ನು ಪರಿಗಣಿಸಲಾಗುವುದಿಲ್ಲ. ಲೇಖಕರು ತಮ್ಮ ಅಂಚೆ ವಿಳಾಸ, ಇ–ಅಂಚೆ, ಫ್ಯಾಕ್ಸ್ ಮತ್ತು ಮೊಬೈಲ್ ಸಂಖ್ಯೆಗಳನ್ನು ನೀಡುವುದು.**
- **ಸಲ್ಲಿಕೆಯಾದ ವೈಜ್ಞಾನಿಕ ಸಾರಾಂಶಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಂತಿಮ ತೀರ್ಮಾನ ಆಯ್ಕೆ ಸಮಿತಿಯದ್ದಾಗಿರುತ್ತದೆ.**
- **ಈಗಾಗಲೇ ಪ್ರಕಟಿಸಿರುವ ಅಥವಾ ಬೇರೆಡೆ ಪ್ರಸ್ತುತ ಪಡಿಸಿರುವ ಅಥವಾ ಅಕಾಡೆಮಿಯ ಸಮ್ಮೇಳನಗಳಲ್ಲಿ ಬಹುಮಾನಿತ ಪ್ರಾತ್ಯಕ್ಷಿಕೆಗಳನ್ನು ಸಲ್ಲಿಸುವಂತಿಲ್ಲ.**
- **ಪ್ರಾತ್ಯಕ್ಷಿಕೆಯು ಯಾವುದೇ ರೀತಿಯ ನಕಲು ಎಂದು ಕಂಡು ಬಂದಲ್ಲಿ ಅನರ್ಹಗೊಳಿಸಲಾಗುವುದು.**
- **ಲೇಖಕರು ವೈಜ್ಞಾನಿಕ ಸಾರಾಂಶ/ಪ್ರಾತ್ಯಕ್ಷಿಕೆ ಯಾವ ವಿಷಯದಡಿ ಬರುವುದೆಂಬುದನ್ನು ನಮೂದಿಸುವುದು.**
- **ಪ್ರಾತ್ಯಕ್ಷಿಕೆಗಳನ್ನು ವಿಷಯ ತಜ್ಞರು ಸಂಶೋಧನೆ, ವಸ್ತುನಿಷ್ಠತೆ, ಸಮಾಜಕ್ಕೆ ಉಪಯುಕ್ತತೆ ಮತ್ತು ಪ್ರಸ್ತುತಿಯ ಗುಣಮಟ್ಟವನ್ನು ಆಧರಿಸಿದ ಮೌಲ್ಯಮಾಪನ ಮಾಡಿ, ನಗದು ಬಹುಮಾನಕ್ಕೆ ಆಯ್ಕೆ ಮಾಡಲಿದ್ದಾರೆ.**
- **ಲೇಖಕರು ವೈಜ್ಞಾನಿಕ ಸಾರಾಂಶ / ಪ್ರಾತ್ಯಕ್ಷಿಕೆಯನ್ನು ಬೇರೆಲ್ಲೂ ಪ್ರಕಟಿಸಿಲ್ಲ ಎಂಬುದರ ಬಗ್ಗೆ ಸ್ವಯಂ ದೃಢೀಕರಣವನ್ನು ಸಲ್ಲಿಸುವುದು.**
- **ಸಂಶೋಧನಾ ವಿದ್ಯಾರ್ಥಿಗಳಿಗೆ ಮತ್ತು ಯುವ ಸಂಶೋಧಕರಿಗೆ ಮಾತ್ರ ಅವಕಾಶವಿರುತ್ತದೆ.**

## ಈ ಸಮ್ಮೇಳನದ ಮುಖ್ಯ ಉದ್ದೇಶಗಳು :

ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಜನಪ್ರಿಯಗೊಳಿಸುವುದು.
ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಾಗುತ್ತಿರುವ ಸಂಶೋಧನೆಗಳು
ಆವಿಷ್ಕಾರಗಳ ಬಗ್ಗೆ ಅರಿವು ಮೂಡಿಸುವುದು.
ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ವಿಜ್ಞಾನ ಮತ್ತು ತಂತ್ರಜ್ಞಾನ
ವಿವಿಧ ಕ್ಷೇತ್ರಗಳಲ್ಲಿ ಬಳಸಿಕೊಳ್ಳುವ ಬಗ್ಗೆ ತಿಳುವಳಿಕೆ ನೀಡುವುದು.
ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವನೆ ಮೂಡಿಸುವುದು.
ಜನಸಾಮಾನ್ಯರಲ್ಲಿ ಆಧುನಿಕ ವೈಜ್ಞಾನಿಕ ಸಂಶೋಧನೆಗಳ ಬಗ್ಗೆ
ಮೂಡಿಸುವುದು.

## ಸಮ್ಮೇಳನದ ವಿವಿಧ ಅಧಿವೇಶನಗಳು :

ಅಕಾಡೆಮಿಯು **"ಮೂರನೇ ಕನ್ನಡ ವಿಜ್ಞಾನ ಮತ್ತು ತಂತ್ರಜ್ಞಾನ ಸಮ್ಮೇ**
**ವನ್ನು ವಿಜಯಪುರದಲ್ಲಿರುವ ಬಿ.ಎಲ್.ಡಿ.ಇ. ಸಂಘದ ಎಸ್.ಬಿ.**
**ಮತ್ತು ಕೆ.ಸಿ.ಪಿ. ವಿಜ್ಞಾನ ಕಾಲೇಜು,** ಇವರ ಸಹಯೋಗದೊಂದಿಗೆ **"ವಿ**
**ಮತ್ತು ತಂತ್ರಜ್ಞಾನದ ಹೊಸ ಆಯಾಮಗಳು" ಎಂಬ ಕೇಂದ್ರ ವಿಷ**
**ಮೇಲೆ 2020ರ ಫೆಬ್ರುವರಿ 18 ಮತ್ತು 19 (ಮಂಗಳವಾರ ಮ**
**ಬುಧವಾರ)** ಆಯೋಜಿಸಲಾಗುತ್ತಿದೆ. ಈ ಸಮ್ಮೇಳನದ ತಾಂತ್ರಿಕ ಅಧಿವೇಶ
ಕೇಂದ್ರ ವಿಷಯಕ್ಕೆ ಸಂಬಂಧಿಸಿದ ವಿಷಯಗಳ ಮೇಲೆ, ನಾಡಿನ
ವಿಜ್ಞಾನಿಗಳು ಮತ್ತು ತಜ್ಞರುಗಳಿಂದ ಕೆಳಕಂಡ ವಿಷಯಗಳಲ್ಲಿ ಪಾ
ಪೂರ್ಣ ಉಪನ್ಯಾಸಗಳನ್ನು ಕನ್ನಡದಲ್ಲಿ ಆಯೋಜಿಸಲಾಗುತ್ತಿದೆ :

- **ಕೃಷಿ ಮತ್ತು ತೋಟಗಾರಿಕಾ ವಿಜ್ಞಾನದಲ್ಲಿ ಹೊಸ ಆಯಾಮಗ**
- **ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗೆ ಡಿಜಿಟಲ್ ತಂತ್ರಜ್ಞ ಹೊಸ ಆಯಾಮಗಳು**
- **ನ್ಯಾನೋ ತಂತ್ರಜ್ಞಾನದಲ್ಲಿ ಹೊಸ ಆಯಾಮಗಳು**
- **ಆರೋಗ್ಯ ವಿಜ್ಞಾನದಲ್ಲಿ ಹೊಸ ಆಯಾಮಗಳು**
- **ಸೈಬರ್ ಭದ್ರತೆಯಲ್ಲಿ ಹೊಸ ಆಯಾಮಗಳು**
- **ಭಾರತೀಯ ಬಾಹ್ಯಾಕಾಶ ಸಂಶೋಧನೆಯಲ್ಲಿ ಹೊಸ ಆಯಾಮ**
- **ಜೇನು ಕೃಷಿಯಲ್ಲಿ ಹೊಸ ಆಯಾಮಗಳು**

